ಚಂದ್ರಪ್ಪನವರನ್ನು ಕೇಳಿದರು–

'ಅಂಕಲ್, ಯಾರೀ ಪವನ್?'

'ಯಾಕೆ?'

'ಸುಮ್ಮನೆ ಕೇಳಿದೆ ಅಷ್ಟೆ. ಮದುವೆ ಚಪ್ಪರದಲ್ಲಿ ಹೇಗೆ ಹೇಗೋ ವರ್ತಿಸುತ್ತಿದ್ದ.'

'ಆತ ಪಕ್ಕದ ಮಾದೇವಿ ಎಸ್ಟೇಟಿನ ಕುಟ್ಟಪ್ಪನ ಮಗ. ಪೋಲಿಗಳ ಜೊತೆ ಸೇರ್‍ಕೊಂಡು ತಂದೆಯನ್ನು ಕರಗಿಸಿ ಅಲೆದಾಡ್ತಿದ್ದಾನೆ.'

'ಅವನ ಬಗ್ಗೆ ಸ್ವಲ್ಪ ಎಚ್ಚರ ಅಂಕಲ್... ನಾನು ಯಾಕೆ ಹೇಳ್ತಿದ್ದೀನಂತ...'

'ಗೊತ್ತಾಯ್ತು. ಆ ಬಗ್ಗೆ ಎಚ್ಚರವಾಗೇ ಇದ್ದೀನಿ ಬಿಡು' ಚಂದ್ರಪ್ಪನವರು ಮಾತು ಮುಗಿಸಿದರೂ ಹೃದಯಾಂತರಾಳದಲ್ಲಿ ತಣ್ಣಗೆ ನಡುಕ ಹತ್ತಿತು. ಕೆಲ ದಿನಗಳ ಹಿಂದಿನ ಘಟನೆಯೊಂದನ್ನು ನೆನೆದಾಗ ಚಂದ್ರಪ್ಪನವರು ಬೆವತು ಹೋದರು.

ಎಸ್ಟೇಟಿನ ಕಾಡು ಹಾದಿ, ಮಾದೇವಿ ಎಸ್ಟೇಟಿನ ಕೆಲಸದಾಕೆ ಜಲಜಾ ಕಾಡುದಾರಿಯಲ್ಲಿ ಒಬ್ಬಳೇ ಬರುತ್ತಿದ್ದಳು. ಅಡ್ಡಕ್ಕೆ ಬೆಳೆದಿದ್ದ ಮರದ ಕೊಂಬೆಯ ಮೇಲೆ ಹೊಂಚುಹಾಕಿ ಕುಳಿತಿದ್ದ ಪವನ್ ತನ್ನ ಚೇಲಾನಿಗೆ 'ಹಿಡಿಯೋ ಅವಳನ್ನು' ಎಂದ. ಚೇಲಾ ಒಂದೇ ದಮ್ಮಿಗೆ ಮರದಿಂದ ಹಾರಿ ಮುನ್ನುಗ್ಗಿದ್ದ, ಹಿಂದಿನಿಂದ ಪವನ್! ಮಾನ ರಕ್ಷಣೆಗಾಗಿ ಜಲಜಾ, ಬೇರೆ ದಾರಿ ಕಾಣದೆ ಬಂದ ಹಾದಿಯಲ್ಲೇ ಹಿಂದಿರುಗಿ ಓಡಿದಳು. ಚೇಲಾ ಪವನ್‌ಗಿಂತ ನಾಲ್ಕು ಹೆಜ್ಜೆ ಮುಂದಿದ್ದ. ಅನಿರೀಕ್ಷಿತವಾಗಿ ಎದುರುಗಡೆಯಿಂದ ಚಂದ್ರಪ್ಪನವರ ಜೀಪ್ ಬರುತ್ತಿತ್ತು. ಜೀಪು ನಿಲ್ಲುತ್ತಲೇ ಆಕೆ ಓಡಿ ಹೋಗಿ ಜೀಪಿನ ಮರೆಯಾಗಿ ನಿಂತು ಅಭಯಕ್ಕಾಗಿ ಹಾತೊರೆದಳು. ಪಕ್ಕದ ಬೇಲಿಯ ಮೇಲಿನಿಂದ ಹಾರಿ ಧಾವಿಸಿ ಪವನ್ ಆಕೆಯನ್ನು ಹಿಡಿಯಲೆಂದು ಅಟ್ಟಿಸಿ ಬಂದಾತನನ್ನು ಹಿಡಿದೆಳೆದಾಡಿ ನೆಲಕ್ಕೆ ಹಾಕಿ ಒಂದೇ ಸವನೆ ಚಚ್ಚತೊಡಗಿದ.

'ಏನೂಂತ ತಿಳ್ಕಂಡಿದ್ದೀಯಾ, ಎಸ್ಟೇಟಿಗೆ ಕೆಲ್ಸಕ್ಕೆ ಬರೋ ಹುಡುಗಿಯರಿಗೆಲ್ಲ ಮಾನ ಮರ್ಯಾದೆ ಇಲ್ಲಾಂತಾನೊ, ಹೊಟ್ಟೆಪಾಡಿಗೆ ಬರ್‍ತಾರೆ ಕಣೋ ಹೊಟ್ಟೆಪಾಡಿಗೆ, ಅಂಥವರ ಮೇಲೆ ಕೈ ಮಾಡೋದಕ್ಕೆ ಎಷ್ಟು ಕೊಬ್ಬೋ ನಿನಗೆ? ಉಳಿಸೋದಿಲ್ಲ ನಿನ್ನನ್ನು...'

'ಅಣ್ಣಯ್ಯ, ಇದೇನ್ಮಾಡ್ತಿ, ಅಣ್ಣಯ್ಯ, ಅಯ್ಯೋ' ಚೇಲಾ ಕೂಗಾಡಿದ.

'ಚುಪ್, ಮಾಡೋದೆಲ್ಲ ಮಾಡಿ 'ಅಣ್ಣಯ್ಯಾ' ಅನ್ನಿಯೇನೊ ಬೋಸುಡಿ ಮಗನೆ. ಬಿಡೋದಿಲ್ಲ ನಿನ್ನ' – ಪವನ್ ಇನ್ನೂ ಚೆನ್ನಾಗಿ ತದಕಿ, ಎಳೆದುಕೊಂಡು ಹೋಗತೊಡಗಿದ. ಅವನ ಬಟ್ಟೆಯೆಲ್ಲ ಹರಿದುಹೋಗಿತ್ತು.

'ಬಿಟ್ಟು ಬಿಡೋ ಪವನ್, ಸಾಕಷ್ಟು ಕೊಟ್ಟಿಯಲ್ಲ. ಒಳ್ಳೇ ಪಾಠ ಕಲಿಸ್ದೆ' ಚಂದ್ರಪ್ಪನವರು ಪವನ್‌ಗೆ ಶಹಭಾಸ್‌ಗಿರಿ ನೀಡಿದರು.

'ಇಲ್ಲ ಅಂಕಲ್, ಇವನನ್ನು ಹೀಗೇ ಬಿಡೋದಿಲ್ಲ. ಇವನ ಕೈನೋ ಕಾಲ್ನೋ ಕೊಚ್ಚಿಹಾಕ್ತೀನಿ. ಅಂದ್ರೇನೆ ಬುದ್ಧಿ ಬರುತ್ತೆ. ಅಲ್ದಿದ್ರೆ ಪೊಲೀಸ್ ಕೈಗೆ ಕೊಟ್ಟುಬಿಡ್ತೀನಿ, ಬಾರ್‍ಲೇ ಮಗನೆ' ಕಾಲರ್ ಹಿಡಿದು ಎಳೆದಾಡುತ್ತಾ ಬಂದ ಹಾದಿಯಲ್ಲೇ ಹಿಂದಕ್ಕೆ ಮರಳಿದ.

'ಅವ್ನಲ್ಲ ಯಜಮಾನ್ರೆ, ನನ್ನನ್ನು ಹಿಡ್ಯೋಕ್ಕೆ ಬಂದೋರು ಅವ್ರೆ' ಆಕೆ ಪವನ್ ಕಡೆ ಬೊಟ್ಟು ಮಾಡುತ್ತಿದ್ದಳು. ಮರುಳುವುದರೆಡೆಯಲ್ಲೆ ಪವನ್ ಹಿಂದಿರುಗಿ ಆಕೆಯನ್ನೊಮ್ಮೆ ದುರುಗುಟ್ಟಿ ನೋಡಿ, ನೆಟ್ಟಗೆ ಮುಂದಕ್ಕೆ ನಡೆದ.

'ಏನು ನಿನ್ನ ಹೆಸರು?' ಚಂದ್ರಪ್ಪನವರು ಕಣ್ಣು ಹೊರಳಿಸಿ ಆಕೆಯನ್ನು ಕೇಳಿದರು.

'ಜಲಜ'

'ನಿನ್ನ ರಕ್ಷಣೆ ಮಾಡಿದೋರನ್ನೇ ದೂರ್‍ತಾ ಇದ್ದೀಯಲ್ಲ. ನೀನೇ ನೋಡಿದ್ಯಲ್ಲ, ಹ್ಯಾಗೆ...'

'ಇಲ್ಲ ಯಜಮಾನ್ರೆ'

'ಮುಚ್ಚು ಬಾಯಿ, ತೋಚಿದ್ದು ಮಾತಾಡ್ಬೇಡ. ಎಲ್ಲಿ ಕೆಲ್ಸ ಮಾಡ್ತಾ ಇದ್ದೀಯ?'

'ಅವರ ತೋಟದಲ್ಲೆ, ಯಜಮಾನ್ರೆ.'

'ಥೂ ಹಲ್ಕಟ್ ಹೆಣ್ಣೆ, ಅನ್ನ ಕೊಟ್ಟೋರ ಬಗ್ಗೆ ಬೇಡದ್ದು ಅನ್ತೀಯಾ?' ಚಂದ್ರಪ್ಪನವರು ಪಕ್ಕದ ಮರದ ರೆಂಬೆ ಮುರಿದು ಆಕೆಯನ್ನು ಹೊಡೆಯಲು ಹೋದರು. ಆಕೆ ಏಟನ್ನು ತಡೆಯಲೆಂಬಂತೆ ಕೈಯೆತ್ತಿ ಹುಚ್ಚು ಆವೇಶದಿಂದ ಗಟ್ಟಿಯಾಗಿ ಕಿರುಚಾಡಿದಳು.

'ನೀವೆಲ್ಲ ದೊಡ್ಡೋರು. ಒಂದೇ ಜಾತಿ ಜನ. ಪಾಪದೋರ ಗೋಳು ನಿಮಗೆ ಅರ್ಥವಾಗೋದಿಲ್ಲ. ನಿಮ್ಮೆದುರಿನಲ್ಲೇ ಕೊಂದು ಹಾಕಿದ್ರೂ ಏನೂ ಆಗ್ಲಿಲ್ಲ ಅನ್ನೋರು ನೀವು. ನಮ್ಮ ಮಾತನ್ನು ಯಾರು ನಂಬ್ತಾರೆ? ನಮಗೆ ಹೇಳೋರು ಕೇಳೋರು ಯಾರೂ ಇಲ್ಲ' ಎನ್ನುತ್ತಾ ಎದೆ ಬಡಿದುಕೊಂಡು ಹಿಂದಕ್ಕೆ ಹಿಂದಕ್ಕೆ ಹೋಗಿ ಮರದ ಬುಡದಲ್ಲಿ ಕುಸಿದಳು. ಕ್ಷಣಹೊತ್ತು ಯೋಚಿಸಿದ ಚಂದ್ರಪ್ಪನವರಿಗೆ ಏನೋ ಹೊಳೆದಂತಾಗಿ 'ಸರಿ, ನೀನು ನಿಮ್ಮ ಹಟ್ಟಿಗೆ ನಡಿ. ನಾಳೆ ಬೆಳಿಗ್ಗೆ ನನ್ನ ಮನೆ ಕಡೆ ಬಾ' ಎಂದು ಹೇಳಿ ರಭಸವಾಗಿ ಮುಂದೆ ಸಾಗಿದರು. ಜೀಪು ಹತ್ತು ಮಾರು ಸರಿಯುವಷ್ಟರಲ್ಲಿ ಬೈಕೊಂದು ಢಂ ಢಂ ಸದ್ದು ಮಾಡುತ್ತಾ ತಗ್ಗಿನ ಕಾಡುಹಾದಿಯಲ್ಲಿ ನುಗ್ಗಿ ಮಾಯವಾಯಿತು. ಚಂದ್ರಪ್ಪ ಜೀಪು ನಿಲ್ಲಿಸಿ ಪಕ್ಕದ ದಿಣ್ಣೆಯೇರಿ ನೋಡಬೇಕಿದ್ದರೆ ಪವನ್‌ನ ಬುಲೆಟ್ ಬೈಕ್. ಹಿಂದೆ, ಹರಿದು ಹೋಗಿದ್ದ ಅಂಗಿಯನ್ನು ಪವನ್‌ನ ಜರ್ಕಿನ್‌ನಿಂದ ಮುಚ್ಚಿಕೊಂಡ ಚೇಲಾ ಅವನಿಗೆ ಜೋತು ಬಿದ್ದು, ನೋವಿನ ಸವಿಯನ್ನು ಮೆಲುಕು ಹಾಕುತ್ತಿದ್ದ. ಚಂದ್ರಪ್ಪನವರ ಮುಖ ಮಾದೇವಿ ಎಸ್ಟೇಟಿನ ಕಡೆಗೆ ತಿರುಗಿತು. ಮರುಕ್ಷಣದಲ್ಲಿ ಅದೊಂದು ಹುಚ್ಚು ಕೆಲಸವಾದೀತೆಂದುಕೊಂಡು ತೆಪ್ಪಗಾದರು.

ಮಾದೇವಿ ಎಸ್ಟೇಟು ಒಂದೊಮ್ಮೆ ಕುಟ್ಟಪ್ಪನವರ ಮೇಲ್ನೋಟದಲ್ಲಿ ಚೆನ್ನಾಗಿ ಮೆರೆದಿತ್ತು. ಪವನ್‌ನ ಯೌವನ, ತಾಯಿಯ ಅತಿ ವಾತ್ಸಲ್ಯ, ದುರ್ಜನರ ಸಹವಾಸ ಮಾದೇವಿ ಎಸ್ಟೇಟನ್ನು ಬರಿದು ಮಾಡಿದ್ದವು. ಕಪಾತು ಕಾಣದ ಕಾಫಿ ಗಿಡಗಳು ಸೊಕ್ಕಿ ಬೆಳೆದು ಕಾಡುಗಳನ್ನು ಸೃಷ್ಟಿಸಿತ್ತೇ ಹೊರತು ಫಸಲನ್ನಲ್ಲ. ಒಂದೊಮ್ಮೆ ಕುಟ್ಟಪ್ಪನವರ ದರ್ಬಾರಿನಲ್ಲಿ ಮಾದೇವಿ ಎಸ್ಟೇಟು ಮೆರೆದ ಕಾರಣವಾಗಿ ಕೆಲವು ಐಶ್ವರ್ಯವಂತ ಕಿಲಾಡಿಗಳೂ ಪವನ್ ಜೊತೆ ಸೇರಿದ್ದರು. ಒಮ್ಮೊಮ್ಮೆ ಒಬ್ಬೊಬ್ಬನ ವಾಹನದಲ್ಲಿ ಆತನ ಸವಾರಿ, ತನ್ನದೆಂದು ಹೇಳಿಕೊಳ್ಳುವಂಥದ್ದು ಏನೂ ಇರಲಿಲ್ಲ; ಬಡಾಯಿ ಬಾಯಿಯೊಂದರ ಹೊರತು. ಬಡಾಯಿಯಲ್ಲೇ ಅದ್ಭುತಲೋಕ ಸೃಷ್ಟಿಸುತ್ತ ಶೀಲಾಳನ್ನು ವಶಕ್ಕೆ ತೆಗೆದುಕೊಂಡಿದ್ದ. ಆಗಾಗ ತೋಟದ ಮಧ್ಯೆ ಚಂದ್ರಪ್ಪನವರು ಇಲ್ಲದಿದ್ದಾಗ ಬಂಗಲೆಯಲ್ಲಿ ಅವರು ಜೊತೆಯಾಗುತ್ತಿದ್ದರು. ಕೆಲಸದಾಕೆ ಜಾನಮ್ಮನಿಗೆ ಮಾತ್ರ ಅವರ ಗುಟ್ಟು ಗೊತ್ತಿತ್ತು. ಪ್ರಾರಂಭದಲ್ಲಿ ಶೀಲಾಳಿಗೆ ಈ ಸಂಬಂಧ ನೆಟ್ಟಗಾಗದೆಂದು ತಿಳಿಯ ಹೇಳುವ ಪ್ರಯತ್ನಪಟ್ಟಿದ್ದಳು. ಢವಢವನೆ ನವದುರ್ಗ ಎಸ್ಟೇಟನ್ನು ಪ್ರವೇಶಿಸುವ ಆತನ ಮೋಟಾರ್‌ಬೈಕ್‌ನ ಸದ್ದು ಕೇಳಿದಾಗಲೆಲ್ಲ ಜಾನಮ್ಮನ ಎದೆಯಲ್ಲಿ ಸಾವಿರ ಒನಕೆಗಳು ಒಮ್ಮೆಲೆ ಕುಟ್ಟಿದಂತಾಗುತ್ತಿತ್ತು. ಚಂದ್ರಪ್ಪನವರಿಗೆ ತಿಳಿಸುವುದಾಗಿ ಬೆದರಿಕೆ ಹಾಕಿದ್ದಳು.

ಎಷ್ಟೆಂದರೂ ಜಾನಮ್ಮ ಮನೆಗೆಲಸದಾಕೆ. ತನ್ನಿಂದಲಾಗಿ ತಾಯಿ ಇಲ್ಲದ ಶೀಲಾಳಿಗೆ ಇನ್ನೇನಾದರೂ ತೊಂದರೆ ಆದರೆ? ಎಂಬುದು ಜಾನಮ್ಮನ ಖೇದ. ಆದ ಹಾಗೆ ಆಗಲಿ, ಚಂದ್ರಪ್ಪನ ಕಿವಿಗೆ ಹಾಕಿ ಮದುವೆಯಾದರೂ ಮಾಡಿಸೋಣವೆಂದರೆ ಅವರ ಕಿವಿಗೆ ಹಾಕುವ ಧೈರ್ಯ ಜಾನಮ್ಮನಿಗಾಗಲೀ ಶೀಲಾಳಿಗಾಗಲೀ ಇರಲಿಲ್ಲ. ಒಂದೆರಡು ಬಾರಿ ಶೀಲಾಳೇ ಅಂತಹ ಪ್ರಯತ್ನಪಟ್ಟಿದ್ದಳು.

'ಅಪ್ಪಾ, ಕಾಲೇಜಿನಿಂದ ಬರ್‍ತಾ ಪವನ್ ಸಿಕ್ಕಿದ್ದರು.'

'ಯಾರು, ಮಾದೇವಿ ಎಸ್ಟೇಟಿನವನೆ?' ಚಂದ್ರಪ್ಪನವರು ಕಣ್ಣಗಲಿಸಿ ಪ್ರಶ್ನಿಸಿದ್ದರು.

'ಹೌದು, ಅವರನ್ನು ಗೊತ್ತಲ್ಲ ನಿಮಗೆ?'

'ಗೊತ್ತು, ನನಗೆ ಗೊತ್ತಿರೋದೇ ಸಾಕು. ನಿನಗೆ ಅವನು ಗೊತ್ತಾಗೋದು ಬೇಡ, ತಿಳೀತೆ?'

'ಯಾಕೆ ಅಪ್ಪಾ?'

'ಅದೆಲ್ಲಾ ನಿನಗೆ ಬೇಡ. ನಿನ್ನ ಕೆಲಸ ನೋಡು ಹೋಗು' ಚಂದ್ರಪ್ಪನವರು ಮಾತನ್ನು ಅಲ್ಲಿಗೇ ಮುರಿದಿದ್ದರು. ತಂದೆಯನ್ನು ಒಲಿಸಿಕೊಳ್ಳಲಾಗದೆ ಸಪ್ಪೆಮೋರೆ ಹಾಕಿದ್ದ ಶೀಲಾಳಿಗೆ 'ಈಗ ಅಮ್ಮ ಇರುತ್ತಿದ್ದರೆ' ಅನ್ನಿಸಿ ದುಃಖ ಉಮ್ಮಳಿಸಿತ್ತು. ಪವನ್‌ನ ಅಸಲಿ ಬುದ್ಧಿಯನ್ನು ಅರಿತಿದ್ದ ಚಂದ್ರಪ್ಪನವರು ತನ್ನ ಮಗಳನ್ನು ಆತನಿಂದ ರಕ್ಷಿಸುವ ಸೂತ್ರವನ್ನು ಗುನುಗುನಿಸುತ್ತಿದ್ದರು.

ಆವೊಂದು ದಿನ, ಹೊರಗಡೆ ಜಾನಮ್ಮ ಯಾರೊಂದಿಗೋ ಮಾತನಾಡುತ್ತಿದ್ದಳು.

'ಇಲ್ಲಿಗೆ ಬರೋದಕ್ಕೆ ಯಾರು ಹೇಳಿದರು?'

'ಇಲ್ಲಿನ ಯಜಮಾನ್ರೇ ಹೇಳಿದ್ರು.'

'ನೀನು ಮಾದೇವಿ ಎಸ್ಟೇಟ್ನಲ್ಲಿ ಕೆಲಸ ಮಾಡ್ತಿದ್ದೋಳಲ್ಲವೆ? ಇದ್ದಕ್ಕಿದ್ದ ಹಾಗೆ ಇಲ್ಲಿಗ್ಯಾಕೆ ಬಂದೆ? ಅಲ್ಲೇನೊ ಮುಂಗಡ ಹಣ ತಕ್ಕೊಂಡು ಮೋಸ ಮಾಡಿ ಇಲ್ಲಿಗೆ ಬಂದಿರ್ಬೇಕು.'

'ಇಲ್ಲ ಅಮ್ಮಾವ್ರೆ.'

'ಅಲ್ಲಿನ ಚಿಕ್ಕೆಜಮಾನ್ರು ನನಗೆ ತೊಂದರೆ ಕೊಟ್ಟಿದ್ದಕ್ಕೆ ಬುದ್ದಿಯೋರು ಇಲ್ಲಿಗೆ ಬಾ ಅಂದಿದ್ದು.'

'ಯಾರು ತೊಂದರೆ ಕೊಟ್ಟದ್ದು?